**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆಗಳ ಇಲಾಖೆ**

ಸಂಖ್ಯೆ:ಸಿಬ್ಬಂದಿ-03/3ಇ/ಸಿಆರ್-16/15-16

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ,
ಗಾಂಧಿನಗರ, ಬೆಂಗಳೂರು-09.
ದಿನಾಂಕ: 25-05-2018.

**ಅಧಿಕೃತ ಜ್ಞಾಪನ**

ವಿಷಯ: ವಾಣಿಜ್ಯ ತೆರಿಗೆಗಳ ಇಲಾಖೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿಯಡಿ ಶೀಘ್ರಲಿಪಿಗಾರರ ಹುದ್ದೆಗಳಿಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಕುರಿತು.

ಉಲ್ಲೇಖ
1) ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ಸಂಖ್ಯೆ: ಆರ್(3)45/2016-17/ಪಿಎಸ್‌ಸಿ, ದಿ: 16-11-2016, ಆರ್(3)59/2016-17/ಪಿಎಸ್‌ಸಿ, ದಿ: 15-12-2016 ಮತ್ತು ಆರ್(3)76/2016-17/ಪಿಎಸ್‌ಸಿ, ದಿ: 13-01-2017.
2) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಆರ್(3)173-210/2017-18/ಪಿಎಸ್‌ಸಿ, ದಿನಾಂಕ: 31-08-2017.
3) ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಆರ್(3)169/2017-18/ಪಿಎಸ್‌ಸಿ, ದಿನಾಂಕ: 31-08-2017.

** * **

ವಾಣಿಜ್ಯ ತೆರಿಗೆಗಳ ಇಲಾಖೆಯ ಹತ್ತು ಶೀಘ್ರಲಿಪಿಗಾರರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ರಾಜ್ಯವ್ಯಾಪಿ ಸ್ಥಳೀಯ ವೃಂದದ ಹೈದರಾಬಾದ್-ಕರ್ನಾಟಕ ಪ್ರದೇಶದ ಮೀಸಲಾತಿಯಡಿ ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಉಲ್ಲೇಖ (2)ರ ಪತ್ರಕ್ಕೆ ಲಗತ್ತಿಸಿದ ಉಲ್ಲೇಖ (3)ರ ಅಧಿಸೂಚನೆಯನ್ವಯ ಸ್ವೀಕರಿಸಲಾಗಿದೆ. ಇದರನ್ವಯ ವಿವಿಧ ಮೀಸಲಾತಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಪರಿಶೀಲನೆ, ಪೊಲೀಸ್ ತನಿಖಾ ವರದಿ, ಅಂಗವಿಕಲ ವೈದ್ಯಕೀಯ ಪ್ರಮಾಣಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, ಹೈದರಾಬಾದ್-ಕರ್ನಾಟಕ ಪ್ರದೇಶದ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಪರಿಶೀಲನೆಗಾಗಿ ಕಳುಹಿಸಲಾಗಿತ್ತು. ಈ ರೀತಿ ಆಯ್ಕೆಯಾದ ಹತ್ತು ಅಭ್ಯರ್ಥಿಗಳಲ್ಲಿ ಒಂಭತ್ತು ಅಭ್ಯರ್ಥಿಗಳ ಪರಿಶೀಲನಾ ಪ್ರಮಾಣ ಪತ್ರಗಳು/ಪ್ರಮಾಣ ಪತ್ರಗಳ ನೈಜತೆಯ ಧೃಢೀಕರಣ ಪತ್ರಗಳನ್ನು ಸ್ವೀಕರಿಸಲಾಗಿದೆ.

ಮೇಲಿನ ಧೃಢೀಕರಣ ಪತ್ರ ಮತ್ತು ಪರಿಶೀಲನಾ ವರದಿಗಳು ಸ್ವೀಕೃತವಾಗಿರುವ ಈ ಕೆಳಕಂಡ ಅಭ್ಯರ್ಥಿಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ಶೀಘ್ರಲಿಪಿಗಾರರ ಹುದ್ದೆಗಳಿಗೆ ವೇತನ ಶ್ರೇಣಿ ರೂ. 27650-650-29600-750-32600-850-36000-950-39800-1100-46400-1250-52650 ರಲ್ಲಿ ಪರೀಕ್ಷಾರ್ಥಿಗಳನ್ನಾಗಿ ನೇಮಕ ಮಾಡಿ ಅವರ ಹೆಸರಿನ ಮುಂದೆ ಅಂಕಣ (6)ರಲ್ಲಿ ಕಾಣಿಸಿರುವ ಕಛೇರಿ/ವಿಭಾಗಗಳಿಗೆ ಹಂಚಿಕೆ ಮಾಡಿ ಆದೇಶಿಸಲಾಗಿದೆ:-

| ರಾಜ್ಯವ್ಯಾಪಿ ಸ್ಥಳೀಯ ವೃಂದ (ಹೈದರಾಬಾದ್-ಕರ್ನಾಟಕ) | | | | | |
|---|---|---|---|---|---|
| ಕ್ರ ಸಂ. | ಕೆ.ಪಿ.ಎಸ್.ಸಿ. ಕ್ರಸಂ. | ಹೆಸರು<br>ಶ್ರೀಮತಿ / ಶ್ರೀ | ಜನ್ಮ ದಿನಾಂಕ | ಮೀಸಲಾತಿ | ನೇಮಕಾತಿ ಮಾಡಲಾದ ಕಛೇರಿ |
| 1 | 2 | 3 | 4 | 5 | 6 |
| 1 | 1 | ಸಂಗೀತ,<br>ಫ್ಲಾಟ್ ನಂ.97,<br>ಜಾದವ್ ಲೇಔಟ್,<br>ಮುಖ್ಯ ರಸ್ತೆ, ಬಿದ್ದಾಪುರ ಕಾಲೊನಿ,<br>ಕಲಬುರಗಿ-585102. | 05/07/1982 | ಸಾಅ/ಮಅ | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಲೆಕ್ಕ ಪರಿಶೋಧನೆ)-2, ಕಲಬುರಗಿ.<br>(ಖಾಲಿ ಹುದ್ದೆಗೆ) |
| 2 | 2 | ಈರಮ್ಮ ಜಿ.,<br>ಕೇರಾಫ್ ವಿಜಯಲಕ್ಷ್ಮಿ,<br>ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್<br>ಅಂಡ್ ಕಂಪ್ಯೂಟರ್ಸ್,<br>ಕೊಪ್ಪಗಲ್ ರಸ್ತೆ,<br>ಗಾಂಧಿನಗರ,<br>ಬಳ್ಳಾರಿ-583103. | 01/06/1988 | ಸಾಅ/ಮಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿ.<br>(ಖಾಲಿ ಹುದ್ದೆಗೆ) |
| 3 | 3 | ಜಗನ್ನಾಥ್,<br>ಸನ್ ಆಫ್ ಲೇಟ್ ಶಿವಮೂರ್ತಿ,<br>ಕೇರಾಫ್ ಡಾ: ಚಂದ್ರಕಾಂತ್ ಕಡ್ಡಿ,<br>ಅಂಬಲಗ ಅಂಚೆ, ಆಲಂದ<br>ತಾಲ್ಲೂಕು, ವಯಾ ಮಹಗಾಂವ್,<br>ಕಲಬುರಗಿ-585316. | 01/07/1989 | ಸಾಅ/ಗ್ರಾಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಕಲಬುರಗಿ.<br>(ಖಾಲಿ ಹುದ್ದೆಗೆ) |
| 4 | 5 | ಜ್ಯೋತಿ ಎನ್.,<br>ಕೇರಾಫ್ ಹೆಚ್.ಸುಂಕಣ್ಣ,<br>ಬಿ.ಎನ್.ದೇವಸ್ಥಾನದ ಹತ್ತಿರ,<br>ಕೊಪ್ಪಗಲ್ ರಸ್ತೆ, 1ನೇ ಕ್ರಾಸ್,<br>ಬಲಗಡೆ, ಎಂ.ವಿ.ನಗರ,<br>ಬಳ್ಳಾರಿ-583103. | 01/06/1988 | ಪ.ಪಂ. | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಜಾರಿ), ಬಳ್ಳಾರಿ.<br>(ಖಾಲಿ ಹುದ್ದೆಗೆ) |
| 5 | 6 | ನಾಗರಾಜ,<br>ಬಿನ್ ಮಾನಪ್ಪ,<br>ಮಾಚಗುಂಡಾಳ,<br>ದೇವರಗೋನಲ್ ಅಂಚೆ,<br>ಸುರಪುರ ತಾಲ್ಲೂಕು,<br>ಯಾದಗಿರಿ ಜಿಲ್ಲೆ-585220. | 10/08/1988 | ಪ್ರವರ್ಗ-1 | ವಾಣಿಜ್ಯ ತೆರಿಗೆ ಅಧಿಕಾರಿ (ಲೆಕ್ಕ ಪರಿಶೋಧನೆ), ಯಾದಗಿರಿ.<br>(ಖಾಲಿ ಹುದ್ದೆಗೆ) |
| 6 | 7 | ಪೂರ್ಣಚಂದ್ರ,<br>ಫ್ಲಾಟ್ ನಂ.26, ಬೋಧಿವೃಕ್ಷ,<br>ಸರಸ್ವತಿಪುರಂ, ಜಿ.ಯು.ಜಿ.<br>ಹಿಂಭಾಗ,<br>ಕುಸನೂರ್ ರಸ್ತೆ,<br>ಕಲಬುರಗಿ ಜಿಲ್ಲೆ-585106. | 20/10/1982 | ಪ.ಜಾ. | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು(ಲೆಕ್ಕ ಪರಿಶೋಧನೆ)-3, ಕಲಬುರಗಿ.<br>(ಖಾಲಿ ಹುದ್ದೆಗೆ) |

| | | | | | |
|---|---|---|---|---|---|
| 7 | 8 | ಸರಸ್ವತಿ ಡಿ., ಮಹಾನಂದಿ ಕೊಟ್ಟಮ್, ವಾಡ್ ನಂ.22, ಅಂಬೇಡ್ಕರ್ ನಗರ, ತಾಳೂರು ರಸ್ತೆ, ನಾಗಪ್ಪನ ಕಟ್ಟೆ ಹತ್ತಿರ, ಬಳ್ಳಾರಿ ಅಂಚೆ, ಬಳ್ಳಾರಿ–583101. | 02/02/1991 | ಪ.ಜಾ./ ಮಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿ. (ಖಾಲಿ ಹುದ್ದೆಗೆ) |
| 8 | 9 | ಶಾಹೀನಾ ಬೇಗಂ, ಡಾಟರ್ ಆಫ್ ಅಬ್ದುಲ್ ರಜಾಕ್, ಡೋರ್ ನಂ.36, ವಾರ್ಡ್ ನಂ.1, ಮಾರುತಿ ಕಾಲೊನಿ, 2ನೇ ಕ್ರಾಸ್, ಎಸ್.ಪಿ.ಸರ್ಕಲ್ ಹತ್ತಿರ, ಶಿರಗುಪ್ಪ ರಸ್ತೆ, ಬಳ್ಳಾರಿ, ಬಳ್ಳಾರಿ ಜಿಲ್ಲೆ–583101. | 20/12/1983 | 2ಬಿ | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಲೆಕ್ಕ ಪರಿಶೋಧನೆ)–3, ಬಳ್ಳಾರಿ. (ಖಾಲಿ ಹುದ್ದೆಗೆ) |
| 9 | 10 | ಚಂದ್ರಕಲಾ, ಡಾಟರ್ ಆಫ್ ಮನೋಹರ್ ಜೋಗದನ್‌ಕರ್, ಪೋಲೀಸ್ ಟ್ರೈನಿಂಗ್ ಸೆಂಟರ್ ಅಂಚೆ, ನಾಗನಹಳ್ಳಿ, ಕಲಬುರಗಿ–585102. | 18/02/1978 | ಸಾಅ/ಅಂ.ಅ. | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಆಂತರಿಕ ಲೆಕ್ಕ ಪರಿಶೋಧನೆ ಮತ್ತು ತಪಾಸಣೆ), ಕಲಬುರಗಿ, (ಖಾಲಿ ಹುದ್ದೆಗೆ) |

<u>ಈ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:–</u>

1) ಈ ನೇಮಕಾತಿಯು ತಾತ್ಕಾಲಿಕವಾಗಿರುತ್ತದೆ.

2) ನೇಮಕಾತಿ ಆದೇಶ ಸ್ವೀಕರಿಸಿದ 15 ದಿನಗಳ ಒಳಗಾಗಿ ಅಭ್ಯರ್ಥಿಗಳು ನಿಯುಕ್ತಿಗೊಳಿಸಲಾದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ನಿಗದಿತ ದಿನಾಂಕದೊಳಗೆ ಕರ್ತ್ಯವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸಾಮಾನ್ಯ ನೇಮಕಾತಿ ನಿಯಮಾವಳಿಗಳ ನಿಯಮ 18(3) ರನ್ವಯ ನೇಮಕಾತಿಯನ್ನು ರದ್ದುಪಡಿಸಲಾಗುವುದು.

3) ಪರೀಕ್ಷಾರ್ಥ ಶೀಘ್ರಲಿಪಿಗಾರರು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ಅನ್ವಯ ಅವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಕಾಲಾವಧಿಯಲ್ಲಿಯೇ ಪರೀಕ್ಷಾರ್ಥ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸುವುದು ಕಡ್ಡಾಯವಾಗಿರುತ್ತದೆ. ಪರೀಕ್ಷಾರ್ಥ ಸೇವಾವಧಿಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು 1974 ರಡಿ ನಿರ್ದಿಷ್ಟಪಡಿಸಿರುವ ಈ ಕೆಳಕಂಡ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿದೆ:–

   1) ಕನ್ನಡ ಭಾಷಾ ಪರೀಕ್ಷೆ
   2) ಅಕೌಂಟ್ಸ್ ಹೈಯರ್
   3) ವಾಣಿಜ್ಯ ತೆರಿಗೆ ಭಾಗ–01
   4) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ

4) ಸರ್ಕಾರದ ಆದೇಶ ಸಂಖ್ಯೆ: ಆಇ (SPL) 04 PET 2005, ದಿನಾಂಕ: 31–03–2006ರ ಮೇರೆಗೆ ಈ ನೇಮಕಾತಿಯು ಪಿಂಚಣಿ ರಹಿತವಾಗಿದ್ದು, ಹೊಸದಾಗಿ ಅನುಷ್ಠಾನಗೊಳಿಸಲಾಗಿರುವ ಅಂಶದಾಯಿ ಪಿಂಚಣಿ ಯೋಜನೆಗೆ (Contributory Pension Scheme) ಒಳಪಟ್ಟಿರುತ್ತದೆ.

5) ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತ ಸಂವಿಧಾನದ ರೀತ್ಯಾ ಕೆಳಕಂಡಂತೆ "ನಿಷ್ಠೆಯ ಪ್ರಮಾಣ ಪತ್ರ" ಸಲ್ಲಿಸತಕ್ಕದ್ದು:-

**ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸುವ ಭಾರತ ಸಂವಿಧಾನದ ರೀತ್ಯಾ "ನಿಷ್ಠೆಯ ಪ್ರಮಾಣ ಪತ್ರ"**

ಅ) ನಾನು ______________________ ಸರ್ಕಾರಿ ಸೇವೆಯಲ್ಲಿ ಪ್ರಾಮಾಣಿಕತೆಯಿಂದಲೂ ಭಾರತ ಸಂವಿಧಾನಕ್ಕೆ ಬದ್ಧನಾಗಿ ನಿಷ್ಠೆಯಿಂದಲೂ ಕಾರ್ಯನಿರ್ವಹಿಸುತ್ತೇನೆ.

ಆ) ನನಗೆ ಮದುವೆಯಾಗಿದೆ/ ಮದುವೆಯಾಗಿರುವುದಿಲ್ಲ. ಒಬ್ಬರಿಗಿಂತ ಹೆಚ್ಚಿನ ಜೀವಂತ ಪತ್ನಿ/ ಪತಿ ಇರುವುದಿಲ್ಲ. ನನ್ನ ಜೀವಂತ ಪತ್ನಿ/ಪತಿಯ ಹೆಸರು ______________________

ಇ) ನನ್ನ ಜನ್ಮ ದಿನಾಂಕವನ್ನು ಮತ್ತು ಹೆಸರನ್ನು ಶಾಲಾ ವರ್ಗಾವಣೆ ಪತ್ರ/ ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯ ಪ್ರಕಾರ ನಿರ್ಧರಿಸಬಹುದಾಗಿದೆ.

ಸ್ಥಳ :

ದಿನಾಂಕ: (ನೌಕರರ ಹೆಸರು ಮತ್ತು ಪದನಾಮ)

(ಸಂಬಂಧ ಪಟ್ಟ ಕಛೇರಿ ಮುಖ್ಯಸ್ಥರು ನೌಕರರ ನಿಷ್ಠಯ ಪ್ರಮಾಣ ಪತ್ರವನ್ನು ಸೇವಾ ಪುಸ್ತಕದಲ್ಲಿ ದೃಢೀಕರಿಸುವುದು)

6) ಎಲ್ಲಾ ಪರೀಕ್ಷಾರ್ಥ ಶೀಘ್ರಲಿಪಿಗಾರರ ಜನ್ಮ ದಿನಾಂಕವನ್ನು ಅವರ ಮೂಲ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ / ಇತರೆ ದಾಖಲೆಗಳ ಅಧಾರದ ಮೇಲೆ ಪರಿಶೀಲಿಸಿ ಕರ್ನಾಟಕ ರಾಜ್ಯ ನೌಕರರ (ವಯೋಮಾನ ನಿರ್ಧರಿಸುವಿಕೆ) ಅಧಿನಿಯಮ 1974ರ ಕಲಂ 3 ರಡಿಯಲ್ಲಿ ಕೈಗೊಳ್ಳಬೇಕಾದ ಕ್ರಮವನ್ನು ಕಛೇರಿಗಳ ಮುಖ್ಯಸ್ಥರು ಜರುಗಿಸುವುದು.

7) ಮೀಸಲಾತಿ ನಿಯಮಾವಳಿಗಳನ್ವಯ ಮೀಸಲಾತಿ ಕೋರಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ವಿವಿಧ ಇಲಾಖೆಗಳು ಕಳುಹಿಸುವ ಪರಿಶೀಲನಾ ವರದಿಯಲ್ಲಿ ಯಾವುದಾದರೂ ಲೋಪ ಕಂಡು ಬಂದಲ್ಲಿ ಅವರು ಮೀಸಲಾತಿ ಕೋಟಾದಡಿ ಆಯ್ಕೆ ಆಗಿ ಪಡೆದಿದ್ದ ಆದೇಶವು ರದ್ದಾಗುತ್ತದೆ ಎಂಬ ಷರತ್ತಿಗೆ ಒಳಪಟ್ಟಿರುತ್ತದೆ.

8) ನೇಮಕಾತಿಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಬಚ್ಚಿಟ್ಟಲ್ಲಿ / ಅಸಮರ್ಪಕ / ಸುಳ್ಳು ಮಾಹಿತಿಯನ್ನು ನೀಡಿ ನೇಮಕಗೊಂಡಿರುವುದು ನೇಮಕಾತಿ ಪ್ರಾಧಿಕಾರದ ಗಮನಕ್ಕೆ ಬಂದರೆ/ಬಂದಾಗ ಅಂತಹ ನೇಮಕಾತಿ ರದ್ದಾಗುವ ಷರತ್ತಿಗೆ ಒಳಪಟ್ಟಿರುತ್ತದೆ.

9) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. ಅಂತಹ ಅಭ್ಯರ್ಥಿಗಳು ಇಲಾಖೆಯಿಂದ ಬಿಡುಗಡೆಯಾಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಹಾಜರುಪಡಿಸತಕ್ಕದ್ದು.

10) ಸರ್ಕಾರಿ ಸೇವೆಯಲ್ಲಿದ್ದು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

11) ಅಭ್ಯರ್ಥಿಗಳ ಜ್ಯೇಷ್ಠತೆಯನ್ನು ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಆಯ್ಕೆ ಪಟ್ಟಿಯ ಕ್ರಮಾಂಕದ ಆಧಾರದ ಮೇಲೆ ಪರಿಗಣಿಸಲಾಗುವುದು.

12) ಕರ್ನಾಟಕ ಲೋಕಸೇವಾ ಆಯೋಗದಿಂದ ವಾಣಿಜ್ಯ ತೆರಿಗೆಗಳ ಇಲಾಖೆಗೆ ಶೀಘ್ರಲಿಪಿಗಾರರ ಹುದ್ದೆಗಳಿಗೆ ರಾಜ್ಯವ್ಯಾಪಿ ಸ್ಥಳೀಯ ವೃಂದದ ಹೈದರಾಬಾದ್-ಕರ್ನಾಟಕ ಪ್ರದೇಶದ ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಅಧಿಸೂಚನೆ ಸಂಖ್ಯೆ: ಆರ್(3)169/2017-18/ಪಿಎಸ್‌ಸಿ, ದಿನಾಂಕ: 31-08-2017 ರಲ್ಲಿನ ಹತ್ತು ಅಭ್ಯರ್ಥಿಗಳ ಪೈಕಿ ಕ್ರ.ಸಂ.(4)ರಲ್ಲಿರುವ ಶ್ರೀ ಶಿವಕುಮಾರ್ ಇವರು ಮೂಲ ದಾಖಲೆಗಳ ಪರಿಶೀಲನೆಗೆ ಗೈರು ಹಾಜರಾಗಿರುತ್ತಾರೆ.

13) ಮೀಸಲಾತಿಯನ್ನು ಕೋರಿ ಸಾಮಾನ್ಯ ಅರ್ಹತೆಯಡಿ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ 30-12-2016ಕ್ಕೆ 35 ವರ್ಷಗಳ ವಯೋಮಿತಿ ಮೀರಿರುವ ಅಭ್ಯರ್ಥಿಗಳೂ ಸೇರಿದಂತೆ ವಿವಿಧ ಮೀಸಲಾತಿಯಡಿ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ಸರ್ಕಾರಿ ಅಧಿಸೂಚನೆ ಸಂಖ್ಯೆ:ಎಸ್‌ಡಬ್ಲ್ಯುಎಲ್ 247 ಎಸ್ಎಡಿ 90, ದಿನಾಂಕ: 22-02-1993ರ ಆದೇಶದನ್ವಯ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಸಿಂಧುತ್ವ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

14) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.

(ಶ್ರೀಕರ್ ಎಂ.ಎಸ್.)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು

ಪ್ರತಿ:

1) ಸಂಬಂಧಿಸಿದ ಪರೀಕ್ಷಾರ್ಥ ಶೀಘ್ರಲಿಪಿಗಾರರಿಗೆ ನೋಂದಾಯಿತ ಅಂಚೆ ಮೂಲಕ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
3) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
4) ಕೇಂದ್ರ ಕಛೇರಿಯ ಎಲ್ಲಾ ಅಪರ ಆಯುಕ್ತರುಗಳು / ಅಪರ ಆಯುಕ್ತರು(ಜಾರಿ), ದಕ್ಷಿಣ ವಲಯ, ಬೆಂಗಳೂರು ಹಾಗೂ ಅಪರ ಆಯುಕ್ತರು(ವಲಯ)-1, 2 ಮತ್ತು 3, ಇವರಿಗೆ ಮಾಹಿತಿಗಾಗಿ.
5) ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರುಗಳು (ಆಡಳಿತ/ಮನವಿಗಳು/ಜಾರಿ/ಜಾಗೃತಿ/ಕಿರಿಯ ಕಾಯ್ದೆಗಳು) ಇವರಿಗೆ ಮಾಹಿತಿಗಾಗಿ.
6) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮಾನವ ಸಂಪನ್ಮೂಲ ಅಭಿವೃದ್ಧಿ), ವಾಣಿಜ್ಯ ತೆರಿಗೆಗಳ ಕಾರ್ಯಾಲಯ, ಬೆಂಗಳೂರು, ಇವರ ಮಾಹಿತಿಗಾಗಿ.
7) ವಾಣಿಜ್ಯ ತೆರಿಗೆ ಉಪ ಆಯುಕ್ತರು(ಸಿಬ್ಬಂದಿ)-2 ಮತ್ತು 3, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
8) ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ.
9) ಕಛೇರಿ ಪ್ರತಿ.